ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/ಶೈವಿ/10/ಸುತ್ತೋಲೆ/2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಉನ್ನತ ಶಿಕ್ಷಣ ಸೌಧ,
ಶೇಷಾದ್ರಿ ರಸ್ತೆ, ಬೆಂಗಳೂರು-560001,
ದಿನಾಂಕ:08.11.2021

**ಸುತ್ತೋಲೆ**

ವಿಷಯ: ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರಗಳನ್ನು ಹಮ್ಮಿಕೊಳ್ಳುವ ಬಗ್ಗೆ.

ಉಲ್ಲೇಖ:
1. ಆಕುಕ&ವೈಶಿಸ/114/2021, ದಿನಾಂಕ:13.09.2021.
2. ಕರಾಏಪ್ರಿಸೊ/ಬಿಎಸ್/01/2019-20 ದಿನಾಂಕ:06.09.2021.
3. ಕರಾಏಪ್ರಿಸೊ/ಬಿಎಸ್/01/2019-20 ದಿನಾಂಕ:15.09.2021.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಕ್ತದಾನ ಶಿಬಿರಗಳನ್ನು ನಡೆಸಲು ಉಲ್ಲೇಖ (1)ರ ಪತ್ರದಲ್ಲಿ ಸರ್ಕಾರ ಸೂಚನೆ ನೀಡಿದೆ. ಅದರಂತೆ ರಾಜ್ಯದಲ್ಲಿ ರಕ್ತದ ಕೊರತೆ ಕಂಡು ಬರದಂತೆ ಮುಂಜಾಗ್ರತಾ ಕ್ರಮವಹಿಸಲು ಕೋವಿಡ್ ನಿಯಮಾವಳಿಗಳನ್ನು ತಪ್ಪದೇ ಪಾಲಿಸುತ್ತಾ ಸ್ವಯಂ ಪ್ರೇರಿತ ರಕ್ತದಾನ ಮೂಲಕ ರಕ್ತ ಸಂಗ್ರಹಿಸಲು, ಎಲ್ಲಾ ರಕ್ತ ಕೇಂದ್ರಗಳಿಗೆ ಉಲ್ಲೇಖ (2) ಮತ್ತು (3) ರಲ್ಲಿ ಈಗಾಗಲೇ ಸೂಚನೆಗಳನ್ನು ನೀಡಿದೆ. ಜಿಲ್ಲೆಗಳಲ್ಲಿ ಸರ್ಕಾರಿ ರಕ್ತ ಕೇಂದ್ರಗಳು ನೋಡಲ್ ರಕ್ತಕೇಂದ್ರಗಳಾಗಿದ್ದು ಜಿಲ್ಲೆಯ ಎಲ್ಲಾ FRU ರಕ್ತಶೇಖರಣಾ ಘಟಕಗಳಿಗೆ ರಕ್ತವನ್ನು ಪೂರೈಸಬೇಕಾಗುತ್ತದೆ. ಆದ್ದರಿಂದ ಸರ್ಕಾರಿ / ಸರ್ಕಾರೇತರ / ವೈದ್ಯಕೀಯ / ಖಾಸಗೀ ಆಸ್ಪತ್ರೆಯ ಎಲ್ಲಾ ರಕ್ತಕೇಂದ್ರಗಳು ಸಂಪೂರ್ಣ ಸ್ವಯಂಪ್ರೇರಿತ ರಕ್ತದಾನದಿಂದಲೇ ರಕ್ತವನ್ನು ಸಂಗ್ರಹಿಸಬೇಕು.

ರಕ್ತವನ್ನು ಕೃತಕವಾಗಿ ಉತ್ಪಾದಿಸಲು ಸಾಧ್ಯವಿಲ್ಲ ಅದನ್ನು ಕೇವಲ ದಾನಿಗಳಿಂದಲೇ ಪಡೆಯಬೇಕಿದೆ. ಆದ್ದರಿಂದ ಇಂದಿನ ಯುವಜನತೆಯಲ್ಲಿ ರಕ್ತದಾನದ ಮಹತ್ವವನ್ನು ತಿಳಿಸಿ, ರಕ್ತದಾನಿಗಳನ್ನು ಪ್ರೋತ್ಸಾಹಿಸುವ ಮತ್ತು ಇತರರಿಗೆ ರಕ್ತದಾನವನ್ನು ಮಾಡಲು ಪ್ರೇರೇಪಿಸುವ ಹಾಗೂ ರಕ್ತದಾನದ ಮಹತ್ವ ಮತ್ತು ಅರಿವು ಮೂಡಿಸುವ ಬಗ್ಗೆ ಜನ ಜಾಗೃತಿಯನ್ನು ಮೂಡಿಸಬೇಕಿದೆ. ಹಾಗೂ ರಕ್ತದ ಅವಶ್ಯಕತೆಯಿರುವ ಸರ್ಕಾರಿ ಆಸ್ಪತ್ರೆಗೆ ಬರುವ ಬಡ ರೋಗಿಗಳ ಜೀವ ಉಳಿಸುವ ಪ್ರಯತ್ನಕ್ಕೆ ಇಂದಿನ ಯುವ ಜನತೆ ಮುಂದಾಗಬೇಕಿದೆ.

ಈ ಸಂಬಂಧ ಸ್ಥಳೀಯ ಹಲವು ಸರ್ಕಾರಿ, ಸರ್ಕಾರೇತರ ರಕ್ತಕೇಂದ್ರಗಳು, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿಗಳ ಮಾರ್ಗದರ್ಶನದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರಗಳನ್ನು ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಸರ್ಕಾರಿ ರಕ್ತಕೇಂದ್ರಗಳ ಸಹಯೋಗದೊಂದಿಗೆ ರಕ್ತದಾನ ಶಿಬಿರಗಳನ್ನು ಹಮ್ಮಿಕೊಳ್ಳುವಂತೆ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ

1. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು- ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ತಿಳಿಸಲಾಗಿದೆ.

ಪ್ರತಿಯನ್ನು:

3. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.

4. ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, 4ನೇ ಮಹಡಿ, ಆರೋಗ್ಯ ಸೌಧ, ಲೆಪ್ರೆಸಿ ಆಸ್ಪತ್ರೆ ಆವರಣ, 1ನೇ ಕ್ರಾಸ್, ಮಾಗಡಿ ರಸ್ತೆ, ಬೆಂಗಳೂರು – 560 023.
5. ಕಛೇರಿ ಪ್ರತಿ.